1ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ಮಳವಳ್ಳಿ

ಸಿಸಿ ನಂಃ90/2017

ಪಿಡಬ್ಲ್ಯೂಃ 4 ಸಿಡಬ್ಲ್ಯೂಃ 7

ಸಾಕ್ಷಿಯನ್ನು ತಾಃ- **27.01.2020** ರಂದು ಪ್ರಮಾಣ ಮಾಡಿಸಲಾಯಿತು

| | |
|---|---|
| ಸಾಕ್ಷಿದಾರರ ಹೆಸರು | ಟಿ.ಎಲ್. ರಾಜಶೇಖರ |
| ತಂದೆಯ ಹೆಸರು | ನಿಂಗಶೆಟ್ಟಿ |
| ವಯಸ್ಸು | 48 ವರ್ಷ |
| ಉದ್ಯೋಗ | ವ್ಯವಸಾಯ |
| ವಾಸ | ತಳಗವಾದಿ ಗ್ರಾಮ, ಮಳವಳ್ಳಿ ತಾಲ್ಲೂಕು. |

**ಮುಖ್ಯ ವಿಚಾರಣೆಃ ಶ್ರೀ ಸ ಸ ಅರವರಿಂದ.**

1. ಈಗ ತೋರಿಸಿದ ದಾಖಲೆಯಲ್ಲಿ ನನ್ನ ಸಹಿ ಇದೆ. ಸದರಿ ದಾಖಲೆಯು ಅಮಾನತು ಮಹಜರ್ ಆಗಿದ್ದು ಅದನ್ನು ಈಗಾಗಲೇ ನಿ.ಪಿ-3 ಎಂದು ಗುರುತಿಸಲಾಗಿದೆ. ಸಾಕ್ಷಿಯ ಸಹಿಯನ್ನು ನಿ.ಪಿ-3 ಬಿ ಎಂದು ಗುರುತಿಸಲಾಯಿತು.

2. ಇಲ್ಲಿಗೆ 4 ವರ್ಷಗಳ ಹಿಂದೆ ಪೋಲೀಸರು ಮಳವಳ್ಳಿ ಗ್ರಾಮಾಂತರ ಪೋಲೀಸ್ ಠಾಣೆಯಲ್ಲಿ ಮಾಡಿರುತ್ತೇನೆ. ಚಾಸಾ-1 ರವರ ವಾಹನ ಅಪಘಾತವಾಗಿದ್ದ ವಿಚಾರವಾಗಿ ನನ್ನ ಸಹಿ ಪಡೆದುಕೊಂಡರು. ಸದರಿ ದಾಖಲೆಯಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ನನ್ನನ್ನು ಬೇರೆ ಯಾರು ಸಹಿ ಮಾಡಿರುತ್ತಾರೆಂದು ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀಸವಾಲು ಮಾಡಲು ಶ್ರೀ ಸ ಸ ಅ ರವರು ಅನುಮತಿಯನ್ನು ಕೋರುತ್ತಾರೆ. ಕಡತವನ್ನು ಪರೀಕ್ಷಿಸಲಾಗಿ ಸಾಕ್ಷಿಯು ಅಮಾನತು ಮಹಜರ್ ವಿರುದ್ಧ ಸಾಕ್ಷ್ಯವನ್ನು ನುಡಿಯುತ್ತಿದ್ದಾರೆ ಆದ್ದರಿಂದ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲಿಗೆ ಅನುಮತಿಯನ್ನು ನೀಡಲಾಯಿತು)

**ಪಾಟೀಸವಾಲುಃ ಶ್ರೀಮತಿ ಸ.ಸ.ಅರವರಿಂದಃ**

3. ದಿನಾಂಕ 30-04-2016 ರಂದು ಚಾಸಾ-1 ರವರು ಕೆ.ಎ.11-ಇಇ-5614 ಸಂಖ್ಯೆಯ ಸುಜುಕಿ ಹಾಯಾಟೆ ಮೋಟಾರ್ ಸೈಕಲನ್ನು ಹಾಜರುಪಡಿಸಿದಾಗ ಅದನ್ನು

ಪೋಲೀಸರು ವಶಕ್ಕೆ ಪಡೆದುಕೊಂಡು ಬೆಳಿಗ್ಗೆ 9-00 ಗಂಟೆಯಿಂದ 10-00 ಗಂಟೆಯವರೆಗೆ ನನ್ನ ಸಮಕ್ಷಮ ನಿ.ಪಿ-3 ರ ಪ್ರಕಾರ ಮಹಜರ್ ಮಾಡಿದರು ಎಂದರೆ ಸರಿ. ಆಗ ಹಾಜರಿದ್ದ ನಾನು ನಿ.ಪಿ-3 ಕ್ಕೆ ಸಹಿ ಮಾಡಿರುತ್ತೇನೆ ಎಂದರೆ ಸರಿ.

**ಪಾಟೀಸವಾಲುಃ ಆರೋಪಿ ಪರ ವಕೀಲರಿಂದ**

4. ಚಾಸಾ-1 ಚಂದ್ರಶೇಖರ್ ರವರು ನಾವು ತಳಗವಾದಿ ಗ್ರಾಮದವರಾದ ಕಾರಣ ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ-3 ರಲ್ಲಿರುವ ಅಂಶಗಳನ್ನು ಪೋಲೀಸರು ನನಗೆ ಓದಿ ಹೇಳಿರುವುದಿಲ್ಲ. ನಾನು ಸಹಿ ಮಾಡಿದ ಸ್ಥಳದ ಚೆಕ್ಕಬಂದಿಯನ್ನು ಹೇಳಲು ಬರುವುದಿಲ್ಲ ಎಂದರೆ ಸರಿ. ಚಾಸಾ-1 ರವರ ವಾಹನ ಸುಜುಕಿ ಕಂಪನಿಯದ್ದು, ಸದರಿ ವಾಹನದ ನಂಬರ್ ನನಗೆ ಹೇಳಲು ಬರುವುದಿಲ್ಲ. ಚಾಸಾ-1 ರವರ ಗಾಡಿಯ ಬಣ್ಣ ಹಾಗೂ ಸದರಿ ವಾಹನಕ್ಕೆ ಏನೇನು ಡ್ಯಾಮೇಜ್ ಆಗಿದೆ ಎಂದು ನನಗೆ ಹೇಳಲು ಬರುವುದಿಲ್ಲ. ನಾನು ನಿ.ಪಿ-3 ಕ್ಕೆ ಯಾವ ಸಂದರ್ಭದಲ್ಲಿ ಹಾಗೂ ಯಾವ ಸಮಯಕ್ಕೆ ಸಹಿ ಮಾಡಿರುತ್ತೇನೆ ಎಂದು ನಿಖರವಾಗಿ ನನಗೆ ಹೇಳಲು ಬರುವುದಿಲ್ಲ. ಸದರಿ ಅಮಾನತು ಮಹಜರ್ ನ್ನು ಮಾಡುವ ಸಮಯದಲ್ಲಿ ಯಾವ ಪೋಲೀಸ್ ಅಧಿಕಾರಿಗಳು ಇದ್ದರು ಎಂದು ನನಗೆ ಹೇಳಲು ಬರುವುದಿಲ್ಲ. ಆ ಸಮಯದಲ್ಲಿ ಚಾಸಾ-6 ಹನುಮಂತ ರವರು ಹಾಜರಿದ್ದರು.

5. ನಾನು ಪೋಲೀಸರ ಕೋರಿಕೆಯ ಮೇರೆಗೆ ಚಾಸಾ-1 ರವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ- ಇಲ್ಲ**

(ಸಾಕ್ಷಿಯ ಹೇಳಿಕೆಯನ್ನು ಬಹಿರಂಗ ನ್ಯಾಯಾಲಯದಲ್ಲಿ ಗಣಕ ಯಂತ್ರದಿಂದ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸ.ಇ.

(ಐಶ್ವರ್ಯ ಚಿದಾನಂದ ಪಟ್ಟಣ್ ಶೆಟ್ಟಿ)
1 ನೇ ಅಪರ ಸಿ.ಜೆ. ಮತ್ತು ಜೆಎಂಎಫ್.ಸಿ
ಮಳವಳ್ಳಿ